**ಓ ಎಸ್ ನಂಃ 199/2017**

**ಪಿ. ಡಬ್ಲ್ಯೂ ಃ 2**

**ದಿಃ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 6 ರವರ ಪರ ಶ್ರೀ ಜಿ ಪಿ ವಕೀಲರಿಂದ**

ನಮ್ಮ ತಂದೆಯ ಹೆಸರು ಭದ್ರಯ್ಯ ದೊಡ್ಡಪ್ಪ ಇವರ ಹೆಸರು ಮುರಳಿಯಪ್ಪ ಎಂದರೆ ಸರಿ. ಪ್ರತಿವಾದಿ 1 ರಿಂದ 4 ರವರು ನಮ್ಮ ದೊಡ್ಡಪ್ಪ ಲಕ್ಕಪ್ಪ ಇವರ ಮಕ್ಕಳೆಂದರೆ ಸರಿ. 5 ನೇ ಪ್ರತಿವಾದಿ ಸೀತಾರಾಮಯ್ಯ ನಮ್ಮ ಚಿಕ್ಕಪ್ಪನೆಂದರೆ ಸರಿ. ಮುರಳಿಯಪ್ಪ ಮತ್ತು ಭದ್ರಯ್ಯ ಇವರು ಮಾತನಾಡುವ ಸ್ಥಿತಿಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬಹುದು ಎಂದರೆ ಸರಿಯಲ್ಲ. ಅವರು ಮಾತನಾಡುವ ಸ್ಥಿತಿಯಲ್ಲಿ ಮತ್ತು ಓಡಾಡುವ ಸ್ಥಿತಿಯಲ್ಲಿಲ್ಲ ಮತ್ತು ಸಾಕ್ಷಿ ಹೇಳಲು ಆಗುವುದಿಲ್ಲವೆಂದು ನಾನು ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯ ಗೊತಾಗುತ್ತದೆ ಎಂಬ ಕಾರಣಕ್ಕೆ ನಾನು ಅಧಿಕಾರಪತ್ರ ಪಡೆದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಜನ್ಮದಿನಾಂಕ ಃ 28.10.1988 ಇರುತ್ತದೆ. ನಾನು ಬಿ.ಇ., (ಎಲೆಕ್ಟ್ರಾನಿಕ್ಸ್) ಮಾಡಿದ್ದೇನೆ. ಕಾಳಿಂಗಯ್ಯ ಇವರು ನಮ್ಮ ತಂದೆ ಮತ್ತು ದೊಡ್ಡಪ್ಪ ಇವರ ತಂದೆ ಎಂದರೆ ಸರಿ. ನಮ್ಮ ತಾತ ಕಾಳಿಂಗಯ್ಯ ಇವರು ಹುಲಿಯಪ್ಪ ಇವರ ಒಬ್ಬನೇ ಮಗನೆಂದರೆ ಸರಿ. ಅವರಿಗೆ 3 ಜನ ಹೆಣ್ಣು ಮಕ್ಕಳು ಮತ್ತು 4 ಜನ ಗಂಡು ಮಕ್ಕಳೆಂದರೆ ಸರಿ. ಲಕ್ಕಪ್ಪ ಮತ್ತು ಲಕ್ಷ್ಮಮ್ಮ ಇವರನ್ನು ಹೊರತುಪಡಿಸಿ ಉಳಿದ ಮಕ್ಕಳೆಲ್ಲ ಜೀವಂತವಾಗಿದ್ದಾರೆ. ಕಾಳಿಂಗಯ್ಯ ಇವರು 1974 ರಲ್ಲಿ ತೀರಿಕೊಂಡಿದ್ದಾರೆಂದರೆ ಸರಿ. ಕಾಳಿಂಗಯ್ಯ ಇವರ ಹೆಂಡತಿ ಗಂಗಮ್ಮ ಇವರು 1979 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ದಾವೆ ಹಾಕುವ ಸಮಯದಲ್ಲಿ ನಮ್ಮ ತಂದೆ ಹಾಗೂ ನಮ್ಮ ದೊಡ್ಡಪ್ಪ ಇವರ ಜೊತೆಗೆ ನಾನು ಸಹ ಲಾಯರ್ ಆಫೀಸ್ ಗೆ ಹೋಗಿದ್ದೇನು, ದಾವೆ ಹಾಕಲು ನಮ್ಮ ತಂದೆ ಮಾಹಿತಿ ಕೊಟ್ಟಿದ್ದಾರೆ. ನಮ್ಮ ಲಾಯರ್ ಬಳಿ ವಂಶವೃಕ್ಷ, ಇ ಸಿ ಮತ್ತು ಆರ್ ಟಿ ಸಿ ಗಳನ್ನು ಕೊಟ್ಟಿದ್ದೇವು. ವಿಭಾಗಪತ್ರವನ್ನು ಸಹ ಕೊಟ್ಟಿದ್ದೇವು.

1980 ರಲ್ಲಿ ನಮ್ಮ ತಾತನ 4 ಜನ ಗಂಡು ಮಕ್ಕಳ ಮದ್ಯೆ ಭಾಗವಾಗಿತ್ತು. ಆ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಭಾಗವಹಿಸಿರಲಿಲ್ಲ ಎಂದರೆ ಸರಿ. ಅವರಿಗೆ ಹಣ

ಕೊಟ್ಟು ಹಕ್ಕು ನಿವೃತ್ತಿ ಪತ್ರ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ಅತ್ತೆಯಂದಿರಿಗೆ

ನಾವು ಹಣ ಕೊಟ್ಟು ಹಕ್ಕು ನಿವೃತ್ತಿ ಪತ್ರ ಬರೆಯಿಸಿಕೊಂಡಿದ್ದೇವೆ. ಎರಡು ಐಟಂ ಸ್ವತ್ತುಗಳಿಗಾಗಿ ದಾವೆ ಮಾಡಿದ್ದೇನೆ. ಅವುಗಳೆಂದರೆ ಸ.ನಂ. 55/10 ಮತ್ತು ಸ.ನಂ. 61/7 ಇರುತ್ತದೆ. ಸಾಕ್ಷಿಗೆ ದಿನಾಂಕ :20.01.1968 ರ ಕ್ರಯಪತ್ರವನ್ನು ತೋರಿಸಿ ಅದರ ಪ್ರಕಾರ ಸಾಕ್ಷಿಯ ತಂದೆ ಶಿವರುದ್ರಯ್ಯ ಇವರಿಗೆ ಐಟಂ ನಂಬರ್ 2 ರ ಸ್ವತ್ತನ್ನು ಮಾರಾಟ ಮಾಡಿದ್ದಾರೆಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಆ ಪತ್ರವನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಅದರಲ್ಲಿ ನಮೂದಿಸಿರುವ ಮರಳಿಯಪ್ಪ ಮತ್ತು ಭದ್ರಯ್ಯ ಎಂದರೆ ನಮ್ಮ ದೊಡ್ಡಪ್ಪ ಮತ್ತು ತಂದೆ ಎಂದರೆ ಸರಿ. ಸೀತಾರಾಮಯ್ಯ ನಮ್ಮ ಚಿಕ್ಕಪ್ಪನಾಗಬೇಕೆಂದರೆ ಸರಿ. ಆ ಪತ್ರದಲ್ಲಿ ನಮ್ಮ ತಾತ ಸಹಿ ಮಾಡಿರುವುದಿಲ್ಲ, ಅದೇ ರೀತಿ ನಮ್ಮ ದೊಡ್ಡಪ್ಪ ಮತ್ತು ನಮ್ಮ ತಂದೆ ಸಹಿ ಮಾಡಿರುವುದಿಲ್ಲ. ಸಾಕ್ಷಿಗೆ ಇನ್ನೊಂದು ಕ್ರಯಪತ್ರ ತೋರಿಸಿ ಆ ಪತ್ರವಾದಾಗ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಆದರೆ ಆ ಕ್ರಯಪತ್ರದಲ್ಲಿ ಇರುವ ಸಹಿಗಳು ನಮ್ಮ ತಾತನದು ಅಲ್ಲ ಎಂದು ಸಾಕ್ಷಿ ಹೇಳುತ್ತಾರೆ.

2 ನೆ ಐಟಂ ಸ್ವತ್ತು ಮಾರಾಟವಾಗಿದೆ ಎಂದು ತೋರಿಸಿದ ಕ್ರಯಪತ್ರವಾದಾಗ ನಾನು ಹುಟ್ಟಿರಲಿಲ್ಲ. ಆ ಎರಡೂ ಪತ್ರಗಳಲ್ಲಿ ನಮ್ಮ ತಾತನ ಸಹಿ ಇರುವುದಿಲ್ಲ. ದಾವಾ ಐಟಂ ನಂಬರ್ 1 ರಲ್ಲಿ ಪೂರ್ವ ಪಶ್ಚಿಮ 35 ಗಜ ಉತ್ತರ ದಕ್ಷಿಣ 65 ಗಜ ಇದನ್ನು ನಮ್ಮ ತಾತ, ನಮ್ಮ ತಂದೆ ಮತ್ತು ಅವರ ಸಹೋದರರು ಸೇರಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. **ಆ ಪತ್ರವನ್ನು ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು.** ಶಿವರುದ್ರಯ್ಯ ಇವರಿಗೆ ನಮ್ಮ ತಾತ ಗಜದ ಲೆಕ್ಕದಲ್ಲಿ ಐಟಂ ನಂಬರ್ 1 ರಲ್ಲಿ ಸ್ವತ್ತು ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ಕ್ರಯಪತ್ರವನ್ನು ಒಪ್ಪಿಕೊಳ್ಳುತ್ತೇನೆಂದು **ಸಾಕ್ಷಿ ಹೇಳಿದ್ದರಿಂದ ಅದನ್ನು ನಿ ಡಿ 2 ಎಂದು ಗುರುತಿಸಲಾಯಿತು. ನಿ ಡಿ 1 ರಲ್ಲಿ ಇರುವ ನಮ್ಮ ತಂದೆ, ನಮ್ಮ ತಾತ, ಚಿಕ್ಕಪ್ಪ ಮತ್ತು ದೊಡ್ಡಪ್ಪ ಇವರ ಸಹಿಗಳು ಮತ್ತು ಹೆಬ್ಬೆಟ್ಟಿನ ರುಜುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ.**

ದಿನಾಂಕ : 20.01.1968 ರ ಂದು ಆದ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿದಾಗ ಸಾಕ್ಷಿ ಅದು ನಮ್ಮ ತಾತ ಮಾಡಿಕೊಟ್ಟ ಕ್ರಯಪತ್ರ ಅಲ್ಲ ಎಂದು ಹೇಳುತ್ತಾರೆ. ಇ ಸಿ ಯಲ್ಲಿ ಆ ಸ್ವತ್ತು ಮಾರಾಟ ಆದ ಬಗ್ಗೆ ಯಾವುದೆ ನಮೂದು ಇರುವುದಿಲ್ಲ. ಹಾಗಾಗಿ ನಮಗೆ ಕ್ರಯಪತ್ರದ ದೃಢೀಕೃತ ಪ್ರತಿ ಸಿಕ್ಕಿಲ್ಲ. ಐಟಂ ನಂಬರ್ 1 ರ ಸ್ವತ್ತಿಗೆ ಮಾಗಡಿ ಸಬ್ ರಿಜಿಸ್ಟ್ರರ್ ಆಫೀಸ್ ನಲ್ಲಿ ಇಸಿ ಪಡೆದಿದ್ದೇನೆ. ನಾವು ಸಬ್ ರಿಜಿಸ್ಟ್ರರ್ ಆಫೀಸ್ ನ ಸಿಬ್ಬಂದಿ ಜೊತೆ ಶಾಮೀಲಾಗಿ ಆ ರೀತಿ ನೋಂದಣಿ ಆದ ಕ್ರಯಪತ್ರಗಳನ್ನು ಬಿಟ್ಟು ಇ ಸಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಇ ಸಿ ಯನ್ನು ನಾವು ಸೃಷ್ಟಿಸಿಕೊಂಡಿದ್ದೇಲವೆ ಎಂದರೆ ಸರಿಯಲ್ಲ. ದಿನಾಂಕ : 20.01.1968 ರ ಕ್ರಯಪತ್ರದಲ್ಲಿ ಕಾಳಿಂಗಪ್ಪ ಇವರು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾತ ಮತ್ತು ಅವರ ಮಕ್ಕಳು ಸೇರಿ ಶಿವರುದ್ರಯ್ಯ ಇವರಿಗೆ ದಾವಾ ಐಟಂ

ನಂಬರ್ 1 ಮತ್ತು 2 ಕ್ಕೆ ಸಂಬಂಧಿಸಿದಂತೆ 3 ಕ್ರಯಪತ್ರಗಳನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂಬರ್ 1 ರ ಸ್ವತ್ತು 1 ಎಕರೆ 9 ಗುಂಟೆ ಇದೆ ಎಂದರೆ ಸರಿ. ಅದರಲ್ಲಿ 5 ಗುಂಟೆ ಖರಾಬು ಇದೆ ಎಂದರೆ ಸರಿ. ಎರಡು ಬಾರಿ ನಮ್ಮ ತಾತ ಮತ್ತು ಅವರ ಮಕ್ಕಳು ಗಜಗಳ ಲೆಕ್ಕದಲ್ಲಿ ಒಟ್ಟು 35 ಗುಂಟೆಗಳನ್ನು ಶಿವರುದ್ರಯ್ಯ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ 9 ಗುಂಟೆ ಉಳಿದಿದೆ ಎಂದರೆ ಸರಿ. ಅದರಲ್ಲಿ ಸ್ಕೂಲಿಗೆ 75X60 ಅಡಿ ಅಂದರೆ ಸುಮಾರು 4 ಗುಂಟೆಯಷ್ಟು ದಾನ ಮಾಡಿದ್ದೇವೆ ಎಂದರೆ ಸರಿ. ಸ್ಕೂಲಿಗೆ ಮಾಡಿದ **ದಾನಪತ್ರವನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ ಡಿ 3 ಎಂದು ಗುರುತಿಸಲಾಯಿತು**. ಆ ದಾನಪತ್ರದಲ್ಲಿ ಪಶ್ಚಿಮ ದಿಕ್ಕಿಗೆ ಶಿವರುದ್ರಯ್ಯ ಇವರಿಗೆ ಮಾರಿದ ಸ್ವತ್ತು ಎಂದು ಚೆಕ್ ಬಂದಿ ಬರೆದಿದೆ ಎಂದರೆ ಸರಿ. ಅದರ ಪೂರ್ವಕ್ಕೆ ಶಿವರುದ್ರಯ್ಯ ಇವರ ಉಳಿಕೆ ಜಮೀನಿದೆ ಎಂದರೆ ಸರಿ. ಸ್ವಂತ ಬೇರೆ ಜಮೀನು ಇದೆ ಎಂದರೆ ಸರಿ.

ದಾನಪತ್ರದಲ್ಲಿ ಬರೆದಿರುವಂತೆ ದಕ್ಷಿಣಕ್ಕೆ 4 ಗುಂಟೆ ಎಂದು ಬರೆದಿದೆ ಎಂದರೆ ಸರಿ. ದಾವಾ ಹಾಕಿರುವ ಸ್ವತ್ತುಗಳನ್ನು ನಿ ಪಿ 64 ರಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದಕ್ಕೆ ದಾವೆ ಮಾಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಾತ ಮತ್ತು ಅವರ ಮಕ್ಕಳು ದಾವಾ ಐಟಂ ನಂಬರ್ 1 ಮತ್ತು 2 ರ ಸ್ವತ್ತನ್ನು ಮಾರಾಟ ಮಾಡಿರುವುದು ನಮಗೆ ಗೊತ್ತಿದ್ದರಿಂದ ಆ ವಿಭಾಗಪತ್ರದಲ್ಲಿ ಆ ಸ್ವತ್ತನ್ನು ಬಿಟ್ಟಿದ್ದೇವೆ ಎಂದರೆ ಸರಿಯಲ್ಲ. ಪಾಲು ಪಟ್ಟಿಯಲ್ಲಿರುವ ಸ್ವತ್ತುಗಳು ಲಕ್ಕಪ್ಪ , ಮರಳಿಯಪ್ಪ ಭದ್ರಯ್ಯ ಮತ್ತು ಸೀತಾರಾಮಯ್ಯ ಇವರಿಗೆ ಖಾತೆಗಳಾಗಿವೆ ಎಂದರೆ ಸರಿ. ಸದರಿ ಮ್ಯುಟೇಷನ್ ನ್ನು **ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ ಡಿ 4 ಎಂದು ಗುರುತಿಸಲಾಯಿತು**. 9 ಗುಂಟೆ ಜಮೀನು ಸ.ನಂ. 61/7 ಎ ಎಂದು ಪೋಡಿಯಾಗಿದೆ ಎಂದರೆ ಸರಿ. ಅದೇ ರೀತಿ 6 ನೇ ಪ್ರತಿವಾದಿ ತಂದೆಗೆ ಮಾರಾಟ ಮಾಡಿದ ಸ್ವತ್ತು ಸ.ನಂ. 61/7 ಬಿ ಯಾಗಿ ಪೋಡಿಯಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ 1 ಸ್ವತ್ತು ಮಾತ್ರ ಗಜದ ಲೆಕ್ಕದಲ್ಲಿ ಮಾರಾಟವಾಗಿತ್ತು, ಇನ್ನು 17 ಗುಂಟೆ ನಮಗೆ ಬರಬೇಕೆಂದು ಸಾಕ್ಷಿ ಹೇಳುತ್ತಾರೆ.

ಸ.ನಂ. 61/7 ಬಿ ಎಂದು ಪೋಡಿಯಾಗಿರುವ ಆರ್ ಟಿ ಸಿ ಇನ್ನು ವಜಾ ಆಗಿಲ್ಲ ಎಂದರೆ ಸರಿ. ಆದರೆ ಎ ಸಿ ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಿದೆ ಎಂದು ಸಾಕ್ಷಿ ಹೇಳುತ್ತಾರೆ. ನಿ ಪಿ 57 ರಿಂದ ನಿ ಪಿ 61 ರವರೆಗಿನ ಪೋಟೋಗಳಲ್ಲಿರುವ ಮನೆಗಳನ್ನು 6 ನೆ ಪ್ರತಿವಾದಿ ಕಟ್ಟಿಸಿದ್ದಾರೆ ಎಂದರೆ ಸರಿ. ಅದನ್ನು ದಾವೆ ಹೂಡಿದ ನಂತರ ನಾವು ಠಾಣೆಗೆ ದೂರು ಕೊಟ್ಟರೂ ಸಹ ಲೆಕ್ಕಿಸದೆ ಕಟ್ಟಿಕೊಂಡಿದ್ದಾರೆ. ಮನೆ ಇನ್ನೂ ಪೂರ್ತಿಯಾಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಾತ ಮತ್ತು ಅವರ ಮಕ್ಕಳು ಮಾರಾಟ ಮಾಡಿದ ಸ್ವತ್ತಿನಲ್ಲಿಯೇ 1996 ಮತ್ತು 2008 ರಲ್ಲಿ 6 ನೇ ಪ್ರತಿವಾದಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 57 ರಲ್ಲಿ 1996 ರಲ್ಲಿ ಮನೆ ಕಟ್ಟಿಕೊಂಡಿದ್ದಾರೆಂದರೆ

ಸಾಕ್ಷಿ ಅವರ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಅವುಗಳು ಕ್ರಯಕ್ಕೆ ತೆಗೆದುಕೊಂಡ ಸ್ವತ್ತುಗಳಲ್ಲಿ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಿ ಡಿ 1 ರ ದೃಢೀಕೃತ ಪ್ರತಿ ಸಿಕ್ಕರೆ ಹಾಜರುಪಡಿಸುತ್ತೇನೆ.

**ಮುಂದುವರೆದ ಪಾಟೀ ಸವಾಲಿಗಾಗಿ ಜಿ ಪಿ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**